**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1033/23**

ಪ್ರಾಸಾ4

ಚಾಸಾ4

ಸಾಕ್ಷಿಯ ಹೆಸರುಃ ಮನಕುಮಾರ
ತಂದೆ /ಗಂಡನ ಹೆಸರು ಃ ಲೇಟ ಎಂ ಎಸ್ ಗಣಪತಿ
ವಯಸ್ಸು ಃ **40**
ಉದ್ಯೋಗ ಃ ವ್ಯವಸಾಯ
ವಾಸ ಸ್ಥಳ ಃ ಮೂರ್ನಾಡು, ಮಡಿಕೇರಿ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 12.12.2024**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ಆರೋಪಿ ನನ್ನ ಸಂಬಂಧಿಕರು . ದಿಃ **22.06.2023** ರಂದು ನಾನು ಆರೋಪಿ ಮನೆಗೆ ನನ್ನ ಸ್ಕೂಟಿ ಸಂಖ್ಯೆ ಕೆ ಎ **12** ಕ್ಯೂ **1470** ರಲ್ಲಿ ಬಂದಿದ್ದು, ಮರು ದಿನ ದಿಃ **23.06.2023** ರಂದು ನನ್ನ ಸ್ಕೂಟರನ್ನು ಆರೋಪಿಯ ಮನೆಯಲ್ಲಿ ಬಿಟ್ಟು ಬಸ್ ನಲ್ಲಿ ನಾನು ಮನೆಗೆ ಹೋಗಿರುತ್ತೇನೆ .

ದಿಃ **09.07.2023** ರಂದು ಆರೋಪಿ ನನ್ನ ಸ್ಕೂಟಿಯಮೇಲೆ ಪ್ರಕರಣ ದಾಖಲಾಗಿದ್ದು ಅದನ್ನು ಅಮಾನತು ಪಡಿಸಿಕೊಳ್ಳಲು ಕುಶಾಲನಗರ ಗ್ರಾಮಾಂತರ ಪೋಲಿಸ ಠಾಣೆಗೆ ಬರುವಂತೆ ನನಗೆ ತಿಳಿಸಿರುತ್ತಾರೆ . ಅದರಂತೆ ನಾನು ಅದೇ ದಿನ ಪೋಲಿಸ ಠಾಣೆಗೆ ಬೆಳಗ್ಗೆ **11.45** ಕ್ಕೆ ಹೋಗಿದ್ದು, ಅಲ್ಲಿ ನನ್ನ ಬಾಬ್ತು ಇದ್ದು ಅದನ್ನು ಪೋಲಿಸರು ನನ್ನ ಸಮಕ್ಷಮ ಮಹಜರ ಮೂಲಕ ಅಮಾನತು ಪಡಿಸಿಕೊಂಡಿರುತ್ತಾರೆ. ಆಗ ನನ್ನೊಂದಿಗೆ ಆರೋಪಿ ಮತ್ತು ಚಾಸಾ **5** ರವರು ಹಾಜರಿದ್ದರು. ಸದರಿ ಮಹಜರನ್ನು **11.45** ರಿಂದ **12.30** ರವರೆಗೆ ತಯಾರಿಸಲಾಯಿತು. ಸದರಿ ಮಹಜರಗೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿ ಸ್ವತ್ತು ಅಮಾನತು ಮಹರಜನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **5** ಎಂದು , ಸಾಕ್ಷಿ ಸಹಿಯನ್ನು ನಿಪಿ **5** ಎ ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಶ್ರೀ ಸಿ ಬಿ ಸಿ ವಕೀಲರಿಂದ

ನಾನು ಮಹಜರನ್ನು ಓದಿ ನೋಡಿರುವುದಿಲ್ಲ. ಯಾವ ವಿಚಾರಕ್ಕಾಗಿ ನನ್ನ ಬಾಬ್ತು ಸ್ಕೂಟಿಯನ್ನು ಪೋಲಿಸ ಠಾಣೆಯಲ್ಲಿ ಹಾಜರು ಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೋಲಿಸರು ಮಹಜರನಲ್ಲಿ ಸಹಿ ಮಾಡಲು ಸೂಚಿಸಿದ ಕಾರಣ ನಾನು ಸಹಿ ಮಾಡಿರುತ್ತೆನೆ ಎಂದರೆ ಸರಿ .

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.